# ಸತ್ಯಂ ವದ, ಧರ್ಮಂ ಚರ...!

■ ವಿ. ವಿಜಯೇಂದ್ರ ರಾವ್

ಒಂದು ಕಂಪನಿಯ ಮಾಲೀಕರಾದ ಪದ್ಮನಾಭರಾಯರು ತಮ್ಮ ವಯಸ್ಸಿನ ಮಿತಿಯಿಂದ ಬೇರೆ ವಾರಸುದಾರರಿಲ್ಲದ ಕಾರಣ ಯೋಗ್ಯನಾದನೊಬ್ಬನಿಗೆ ಕಂಪನಿಯನ್ನು ಹಸ್ತಾಂತರಿಸಲು ಯೋಚಿಸಿ ತಮ್ಮ ಕೆಳಗೆ ದುಡಿಯುವ ಎಲ್ಲ ವರ್ಗದ ಜನರನ್ನು ಒಂದು ಮುಖ್ಯ ತುರ್ತು ಸಭೆಗೆ ಆಹ್ವಾನಿಸಿದರು.

ಮಾಲೀಕರು ಏನು ಹೇಳುತ್ತಾರೆ ಅನ್ನೋ ಕುತೂಹಲದಿಂದ ಎಲ್ಲರೂ ಗಡಿಬಿಡಿಯಿಂದ ಬಂದರು. ರಾಯರು ನನಗೆ ವಯಸ್ಸಾಗುತ್ತಿದೆ, ಮುಂಚಿನಂತೆ ಕಾರ್ಯ ನಿರ್ವಹಿಸಲು ಕಷ್ಟವಾಗುತ್ತಿದೆ. ಆದ್ದರಿಂದ ನಿಮ್ಮಲ್ಲಿ ಯಾರು ಅತಿ ಯೋಗ್ಯರೋ ಅವರನ್ನು ಮುಖ್ಯಸ್ಥರಾಗಿ ಮಾಡುತ್ತೇನೆ ಎಂದರು. ಅದಕ್ಕಾಗಿ ಒಂದು ಸಣ್ಣ ಪರೀಕ್ಷೆ ನೀಡುತ್ತೇನೆ. ಅದರ ನಂತರ ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂದು ಹೇಳಿ, ಎಲ್ಲರಿಗೂ ಒಂದೊಂದು ಗಿಡದ ಬೀಜವನ್ನು ಕೊಟ್ಟು, ಇದನ್ನು ನೀರು ಹಾಕಿ, ಗೊಬ್ಬರ ಹಾಕಿ ಯಾರು ಜತನದಿಂದ ಬೆಳೆಸುತ್ತಾರೋ ನೋಡೋಣ, ಮುಂದಿನ ವರ್ಷ ಇದೇ ತಾರೀಖಿನಂದು ಇದರ ಫಲಿತಾಂಶ ತಿಳಿಯುವುದು, ಎಲ್ಲರಿಗೂ ಶುಭವಾಗಲಿ ಎಂದು ಹೇಳಿ ನಿರ್ಗಮಿಸಿದರು.

ಎಲ್ಲರಂತೆ ಅರುಣ್ ಸಹ ಕೊಟ್ಟ ಬೀಜವನ್ನು ಉತ್ಸಾಹದಿಂದ ಹೊಸ ಮಣ್ಣಿನ ಕುಂಡದಲ್ಲಿ ನೆಟ್ಟು, ಗೊಬ್ಬರ ಹಾಕಿ, ದಿನನಿತ್ಯ ನೀರನ್ನು ಹಾಕಿ ಗಮನಿಸುತ್ತಿದ್ದನು. ಆದರೆ, ಅವನಿಗೆ ಕುಂಡದಲ್ಲಿ ಬೀಜದಿಂದ ಒಂದು ಚೂರು ಮೊಳಕೆ ಬರುವ ಲಕ್ಷಣಗಳು ಕಾಣಿಸುತ್ತಲೇ ಇರದಿದ್ದರಿಂದ ನಿರಾಸೆಯಾದರೂ ತೋರ್ಪಡದೆ ಅದಕ್ಕೆ ಮಾತ್ರ ನೀರು ಹಾಕುವುದನ್ನು ಮಾತ್ರ ಬಿಡಲಿಲ್ಲ.

ಇತ್ತ ಆಫೀಸಿನಲ್ಲಿ ಎಲ್ಲರ ಬಾಯಲ್ಲೂ ತಮ್ಮ ಗಿಡ ಇಷ್ಟು ಬೆಳೆಯಿತು, ಹೂಬಿಟ್ಟಿತು ಅನ್ನೋ ಮಾತೇ ಯಾವಾಗಲೂ. ಇದನ್ನು ಕೇಳುವಾಗ ತನ್ನದು ಮಾತ್ರ ಮೊಳಕೆ ಸಹ ಬರಲಿಲ್ಲ ಅಂತ ಅರುಣ್ ಮನಸ್ಸಿಗೆ ಕಸಿವಿಸಿಯಾಗುತ್ತಿತ್ತು. ಹೀಗೆ ಒಂದು ವರ್ಷ ಕಳೆದು ರಾಯರು ಹೇಳಿದ ಆ ದಿನ ಬಂದೇಬಿಡ್ತು!

ಅರುಣ್ ಕೀಳರಿಮೆಯಿಂದ ನಾನು ಇವತ್ತು ಆಫೀಸಿಗೆ ಹೋಗುವುದಿಲ್ಲ ಅಂತ ಹೇಳಿದಾಗ, ಅವನ ಪತ್ನಿ ವಿದ್ಯಾ ರೀ, ನೀವು ಅವರು ಹೇಳಿದ ಕೆಲಸ ನಿಯತ್ತಾಗಿ ಮಾಡಿದ್ದೀರಾ. ಅದು ಮೊಳಕೆ ಬರದಿದ್ರೆ ನಿಮ್ಮದೇನು ತಪ್ಪು? ನೀವು ಖಂಡಿತವಾಗಿ ಆಫೀಸಿಗೆ ಹೋಗಿ ಸತ್ಯವನ್ನೇ ಹೇಳಿ ಎಂದು ಅವನನ್ನು ಬಲವಂತವಾಗಿ ಆಫೀಸಿಗೆ ಕಳಿಸಿದಳು.

ಅಂದು ಎಲ್ಲರೂ ಲಗುಬಗೆಯಿಂದ ತಮ್ಮ ತಮ್ಮ ಕುಂಡದ ಗಿಡಗಳನ್ನು ಉತ್ಸಾಹದಿಂದ ತಂದಿದ್ದರು. ಆದರೆ, ಅರುಣ್ ಮಾತ್ರ ಮುದುರಿಕೊಂಡು ತನ್ನ ಖಾಲಿ ಕುಂಡದೊಂದಿಗೆ ಕೊನೆಯ ಸಾಲಿನಲ್ಲಿ ನಿಂತನು. ರಾಯರು ಒಂದು ರೌಂಡ್ ಎಲ್ಲರ ಗಿಡಗಳನ್ನು ನೋಡುತ್ತಾ, ಗುಡ್, ವೆರಿಗುಡ್ ಅಂತ ಹೇಳುತ್ತಾ ಮೇಲೆ ಸ್ಟೇಜಿಗೆ ಹೋಗಿ, ಕೊನೆಯ ಸಾಲಿನಲ್ಲಿ ಇದ್ದ ಅರುಣ್‌ನನ್ನು ತಮ್ಮತ್ತ ಬರುವಂತೆ ಕರೆದರು. ಅರುಣ್ ತನ್ನ ಖಾಲಿ ಕುಂಡವನ್ನು ನೋಡಿ ಡಿಸ್ ಮಿಸ್ ಮಾಡೇಬಿಡಬಹುದು ಅಂತ ಆತಂಕದಿಂದಲೇ ಆ ಸ್ಟೇಜಿನ ಮೇಲೆ ಹೋದನು.

ರಾಯರು ನೀವೆಲ್ಲಾ ಕುಳಿತುಕೊಳ್ಳಿ, ನನ್ನ ಕಂಪನಿಯನ್ನು ನಡೆಸಲು ಪ್ರಾಮಾಣಿಕ ವ್ಯಕ್ತಿ ಕೊನೆಗೂ ಸಿಕ್ಕಿದ ಎಂದಾಗ, ಎಲ್ಲರಿಗೂ ಅಚ್ಚರಿ, ಅವರವರು ತಮ್ಮ ಗಿಡದ ದೆಸೆಯಿಂದಾಗಿ ತಾವೇ ಮುಂದಿನ ಮಾಲೀಕರು ಎಂದು ಮನಸ್ಸಿನಲ್ಲಿ ಬೀಗುತ್ತಿದ್ದವರಿಗೆ ದೊಡ್ಡ ಶಾಕ್...! ಯಾರಪ್ಪ ಅವನು ಎಂದು ಯೋಚಿಸುತ್ತಿದ್ದಾಗಲೇ, ರಾಯರು ನಮ್ಮ ಅರುಣ್ ಮುಂದೆ ನಮ್ಮ ಕಂಪನಿಯ ಮಾಲೀಕ ಎಂದು ಘೋಷಿಸಿದರು. ನೋಡಿ, ನಾನು ನಿಮ್ಮೆಲ್ಲರಿಗೂ ಬೇಯಿಸಿ ಒಣಗಿಸಿದ ಬೀಜ ಕೊಟ್ಟಿದ್ದೆ.ಅದರಿಂದ ಮೊಳಕೆ ಬರಲು ಸಾಧ್ಯವಿಲ್ಲ. ನೀವೆಲ್ಲರೂ ನಿಮ್ಮ ಆತ್ಮಕ್ಕೆ ವಂಚನೆ ಮಾಡಿ, ನನ್ನ ಮೆಚ್ಚುಗೆ ಪಡೆಯಲು ಬೇರೆ ಬೀಜವನ್ನು ಹಾಕಿ ಬೆಳೆಸಿ ತಂದಿದ್ದೀರ. ಆದರೆ, ಅರುಣ್ ಒಬ್ಬನೇ ನಿಯತ್ತಾಗಿ ನಾನು ಕೊಟ್ಟ ಬೀಜವನ್ನು ಹಾಕಿ ನೋಡಿ ಪ್ರಯತ್ನ ಪಟ್ಟು, ವಿಫಲನಾದರೂ ಅದನ್ನೇ ತಂದು ತಾನು ಪ್ರಾಮಾಣಿಕನೆಂದು ನಿರೂಪಿಸಿದ್ದಾನೆ. ಆದ್ದರಿಂದ ಅವನೇ ಈ ಕಂಪನಿಯನ್ನು ನಡೆಸಲು ಸೂಕ್ತ ವ್ಯಕ್ತಿ ಎಂದರು. ಮತ್ತವರೆಲ್ಲಾ ಕೈ ಕೈ ಹಿಸುಕಿಕೊಂಡು ತಮಗೆ ಆ ಒಳ್ಳೆಯ ಬುದ್ಧಿ ಬರಲಿಲ್ಲವೇ ಅಂತ ಮರುಗಿದರು.

ಆದ್ದರಿಂದ ಮಕ್ಕಳೇ, ಯಾವಾಗಲೂ ನಾವು ಸತ್ಯವಂತರಾಗಿ, ಪ್ರಾಮಾಣಿಕವಾಗಿ ದುಡಿದರೆ ಯಾವುದೇ ರಂಗದಲ್ಲೂ ಮೇಲೆ ಬರುವುದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ...! ■




ವಿಜಯ ಕುಮಾರಿ